# ವೀರಶೈವ ವಚನ ಸಾಹಿತ್ಯ

ಪ್ರೊ. ಕೆ.ಬಿ.ಪ್ರಭುಪ್ರಸಾದ್

**ವಚನಗಳು ಕನ್ನಡನುಡಿಯ ಉಪನಿಷತ್ತುಗಳು; ಶರಣರ ಅನುಭಾವದ ಅಮೃತ ಹನಿಗಳು; ಕನ್ನಡ ಸಾಹಿತ್ಯದ ರತ್ನಪುಂಜಗಳು. ಇವುಗಳ ತಾತ್ತ್ವಿಕ ಮತ್ತು ಸಾಹಿತ್ಯಿಕ ಮಹೋನ್ನತಿಯ ಪರಿಚಯ ಮಾಡಿಕೊಟ್ಟಿರುವ ಲೇಖ-ಕರು ನಿವೃತ್ತ ಪ್ರಾಂಶುಪಾಲರು, ಕನ್ನಡದ ಹೆಸರಾಂತ ಲೇಖಕರು.**



## ವೀರಶೈವ ಸಾಹಿತ್ಯ

**ವೀ**ರಶೈವ ಸಾಹಿತ್ಯ ತುಂಬಾ ವ್ಯಾಪಕವಾದುದು. ೧೧-೧೨ ನೆಯ ಶತಮಾನದಲ್ಲಿ ಆರಂಭವಾದುದು. ೧೯ ನೆಯ ಶತಮಾನದವರೆಗೂ ಹಬ್ಬಿರುವಂತಹದು.

ಸಾಹಿತ್ಯವನ್ನು ಹೀಗೆ ಧರ್ಮದ ಹೆಸರಿನಲ್ಲೇಕೆ ಕರೆಯ ಬೇಕು? ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಈ ಪರಿಪಾಠ ರೂಢಿಗೆ ಬಂದಿದೆ. ಸಾಹಿತ್ಯ ಚರಿತ್ರಕಾರರು ಕನ್ನಡ ಸಾಹಿತ್ಯವನ್ನು ಮೂರು ಬಗೆಯಲ್ಲಿ ವಿಂಗಡಿಸಿ ನೋಡಿದ್ದಾರೆ :

೧) ಶತಮಾನದ ಕಾಲಾನುಕ್ರಮದಲ್ಲಿ, ೧೦ ನೆಯ ಶತಮಾನದ ಸಾಹಿತ್ಯ-೧೬ ನೆಯ ಶತಮಾನದ ಸಾಹಿತ್ಯ- ಎಂಬ ರೀತಿಯಲ್ಲಿ.

೨) ರಾಜವಂಶಗಳಿಗನುಗುಣವಾಗಿ - ಚಾಲುಕ್ಯ, ಹೊಯ್ಸಳ, ವಿಜಯನಗರ, ಸಾಮ್ರಾಜ್ಯಗಳ ಕಾಲದ ಸಾಹಿತ್ಯ.

೩) ಜೈನ, ವೀರಶೈವ, ಬ್ರಾಹ್ಮಣ ಸಾಹಿತ್ಯಗಳೆಂದು ಕವಿಗಳ ಮತಗಳನ್ನು ಅನುಸರಿಸಿ ಮಾಡಿದ ವಿಭಾಗ.

ವ್ಯಾಸಂಗದ ಅನುಕೂಲಕ್ಕಾಗಿ ವಿದ್ವಾಂಸರು ಹೀಗೆ ಕೆಲವು ರೀತಿಯ ವಿಭಾಗಗಳನ್ನು ಮಾಡಿಕೊಳ್ಳುವುದರಲ್ಲಿ ತಪ್ಪೇನೂ ಇಲ್ಲ. ಆದರೆ ವ್ಯಾಸಂಗದಲ್ಲಿ ಮುಖ್ಯವಾದುದು ಸಾಹಿತ್ಯದೃಷ್ಟಿ. ಅದರ ಜೊತೆಗೆ ಯುಗಧರ್ಮವನ್ನೂ ಗಮನಿಸಬೇಕು.

ಕನ್ನಡ ಸಾಹಿತ್ಯ ಎರಡು ಸಾವಿರ ವರ್ಷಗಳಷ್ಟು ಹಳೆಯದಾದರೂ ೯ ನೆಯ ಶತಮಾನದ ನೃಪತುಂಗನ 'ಕವಿರಾಜಮಾರ್ಗ'ವೇ ನಮಗೆ ದೊರೆತಿರುವ ಮೊದಲ ಗ್ರಂಥ. ಇದು ಕಾವ್ಯಲಕ್ಷಣಗಳನ್ನು ಕುರಿತ ಪ್ರೌಢಗ್ರಂಥವಾಗಿದ್ದು ಆ ಹೊತ್ತಿಗೆ ಕನ್ನಡ ಸಾಹಿತ್ಯ ಸಾಕಷ್ಟು ಔನ್ನತ್ಯವನ್ನು ಸಾಧಿಸಿರಬೇಕು ಎಂಬುದನ್ನು ಅದು ಸೂಚಿಸುತ್ತದೆ. ಆ ಮಟ್ಟದ ಸಾಧನೆಗೆ, ಈ ಗ್ರಂಥದ ಪೂರ್ವದಲ್ಲಿ ಸಾವಿರ ವರ್ಷಗಳಾದರೂ ಹಿಡಿದಿರಬಹುದು.

'ವೀರಶೈವ ಸಾಹಿತ್ಯ'ವನ್ನು ಕುರಿತು ತಿಳಿದುಕೊಳ್ಳಬೇಕೆಂದರೆ ಮತೀಯ ವಿಭಾಗವೇ ನಮ್ಮ ನೆರವಿಗೆ ಬರುತ್ತದೆ. ಅದಕ್ಕೆ ಮೊದಲು ಒಂದು ಮಾತನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಜೈನ, ವೀರಶೈವ, ಬ್ರಾಹ್ಮಣ ಎಂಬೀ ಸಾಹಿತ್ಯವಿಭಾಗಗಳು ಸ್ಥೂಲವಾಗಿ ಮಾಡಿರುವಂಥವು. ಈ ಒಂದೊಂದು ಕಾಲದಲ್ಲೂ ಮೂರೂ ಮತಗಳ ಕವಿಗಳು ಕೃತಿರಚನೆ ಮಾಡುತ್ತಿದ್ದರು. ಆಗ ಯಾವ ಮತದ ಕವಿಗಳು ಹೆಚ್ಚು ಸಂಖ್ಯೆಯಲ್ಲಿದ್ದರೋ ಆ ಕವಿಗಳ ಮತದ ಹೆಸರಿನಿಂದ ಅಂದಿನ ಸಾಹಿತ್ಯಯುಗವನ್ನು ಕರೆದಿದ್ದಾರೆ.

ವೀರಶೈವ ಸಾಹಿತ್ಯವನ್ನು ಮೂರು ಬಗೆಯಾಗಿ ಗುರುತಿಸಬಹುದು. ವೀರಶೈವ ಸಾಹಿತ್ಯದ ವೈಶಿಷ್ಟ್ಯಕ್ಕೆ, ವೈವಿಧ್ಯಕ್ಕೆ, ಕ್ರಾಂತಿಕಾರಕವಾದ ವಿನೂತನ ಹೆಜ್ಜೆಗೆ ಮೂಲ ಕಾರಣವೂ ಸ್ಫೂರ್ತಿಯೂ ಆಗಿದ್ದ ವಚನಸಾಹಿತ್ಯ ಒಂದು ಬಗೆ. ಸಾಂಪ್ರದಾಯಿಕ ಚಂಪೂಶೈಲಿಯ ಕಾವ್ಯಕ್ಕೆ ಬದಲಾಗಿ ಬಂದ ರಗಳೆ ಮತ್ತು ಷಟ್ಪದಿ ಕಾವ್ಯಗಳು ಎರಡನೆಯ ಬಗೆ. ಪ್ರಾದೇಶಿಕ ಜಾನಪದದಿಂದ ಉಗಮವಾದ ಸಾಂಗತ್ಯ ಮತ್ತು ತ್ರಿಪದಿ ಸಾಹಿತ್ಯ ಮೂರನೆಯ ಬಗೆ. ಈ ಮೂರು ಬಗೆಯ ಸಾಹಿತ್ಯಗಳೂ ಜನಜೀವನಕ್ಕೆ, ಸಮಾಜಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟುದರಿಂದ ಜನಪ್ರಿಯವಾದುವು. ಒಟ್ಟು ವೀರಶೈವ ಸಾಹಿತ್ಯಕ್ಕೆ ಸ್ಫೂರ್ತಿಯಾಗಿದ್ದು, ಕನ್ನಡ ಸಾಹಿತ್ಯಕ್ಕೇ ಹೊಸ ತಿರುವನ್ನು ಕೊಟ್ಟ ಅತ್ಯಂತ ಮಹತ್ವದ ೧೨ ನೆಯ ಶತಮಾನದ ವಚನಸಾಹಿತ್ಯಕ್ಕೆ ಸೀಮಿತಗೊಳಿಸಿದ ಅವಲೋಕನ ಈ ಲೇಖನದ ವಿಷಯ.

### ವಚನವೆಂದರೆ ಏನು?

ವಚನ ಸಾಹಿತ್ಯ ಆರಂಭವಾದುದು ೧೧ ನೇ ಶತಮಾನದಲ್ಲೇ ಆದರೂ ಅದು ಹುಲುಸಾಗಿ ಬೆಳೆಯಲು ಅವಕಾಶವಾದುದು ೧೨ ನೆಯ ಶತಮಾನದ ಶಿವಶರಣರ ಕಾಲದಲ್ಲಿ. 'ವಚನ' ಒಂದು ವಿಶಿಷ್ಟವಾದ ಪ್ರಕಾರ. ಇತ್ತ, ಛಂದೋಬದ್ಧವಾದ ರಚನೆಯಲ್ಲ; ಪದ್ಯದ ಚೌಕಟ್ಟಿನಲ್ಲಿ ಬಂಧಿತವಾದುದಲ್ಲ. ಕಾವ್ಯಗುಣ ಪ್ರಧಾನವಾದುದಲ್ಲ; ಅತ್ತ, ಪೂರ್ಣ ವೈಚಾರಿಕವಾದ ಗದ್ಯವೂ ಅಲ್ಲ, ನಿರೂಪಣೆಯಲ್ಲ, ವರ್ಣನೆಯೂ ಅಲ್ಲ. **ವಚನವೆಂಬುದು ಚಿಂತನ, ಅನುಭವಗಳಿಂದ ಹೊಮ್ಮಿದ ಮಾತು. ಹೃದಯಕ್ಕೆ ನೇರವಾಗಿ ಹೋಗುವ, ವೈಚಾರಿಕಬುದ್ಧಿಯನ್ನು ಪ್ರಚೋದಿಸುವ, ಅನುಭವದ ಅಥವಾ ಅನುಭಾವದ ಮಾತು.** ಶರಣರು ಕಾವ್ಯೋದ್ದೇಶದಿಂದಾಗಲಿ, ಸಾಹಿತ್ಯದೃಷ್ಟಿಯಿಂದಾಗಲಿ ವಚನಗಳನ್ನು ರಚಿಸಲಿಲ್ಲ. ತಮ್ಮ ನೂತನ ಚಿಂತನೆಗಳನ್ನು ಜನಮನದಲ್ಲಿ ಬಿತ್ತಿ ಹೊಸ ಜೀವನಶೈಲಿಯನ್ನು ಬೆಳೆಸಲಿಕ್ಕಾಗಿ, ದೀನರು, ದಲಿತರು, ಅನಕ್ಷರಸ್ಥರೂ ಆದ ಸಾಮಾನ್ಯರಲ್ಲಿಯೂ ಆತ್ಮಜಾಗೃತಿಯನ್ನು ಉಂಟುಮಾಡಲಿಕ್ಕಾಗಿ, ವ್ಯಕ್ತಿಗೌರವ, ವೃತ್ತಿಗೌರವ, ಸತ್ಯಸಂಧತೆ, ನ್ಯಾಯಪರತೆ, ಜೀವಾನುಕಂಪೆ, ಪ್ರೀತಿ ಮುಂತಾದ ಮಾನವೀಯ ಮೌಲ್ಯಗಳನ್ನು ಆಚರಣೆಯಲ್ಲಿ ಎತ್ತಿ ಹಿಡಿಯುವುದಕ್ಕಾಗಿ, ಸರಳ ಆಡುನುಡಿಗಳ ಅಭಿವ್ಯಕ್ತಿಯನ್ನೇ ಅವರು ಆರಿಸಿಕೊಂಡರು. ಅವುಗಳೇ ವಚನಗಳಾದುವು. 'ವಚನ' ಎಂದರೆ ಹೇಳಿದುದು, ಉಕ್ತಿ ಎಂದರ್ಥ. ಶಿವಶರಣರ ಗಾಢವಾದ ಚಿಂತನೆ ಮತ್ತು ಸಾಂದ್ರವಾದ ಅನುಭವದ ವಚನಗಳಲ್ಲಿ ಉಪಯೋಗಿಸಿರುವ ಸಾಧಾರಣ ಪದಗಳಿಗೂ ಅದ್ಭುತ ಶಕ್ತಿ-ಸಾಮರ್ಥ್ಯಗಳನ್ನು ತುಂಬಿದವು. ಇದರಿಂದ ಕನ್ನಡಭಾಷೆಗೆ ಹೊಸ ಚೈತನ್ಯ ಬಂದಿತು. ಎಂಥಾ ಅಮೂರ್ತ ಭಾವವನ್ನೂ ವಿಚಾರವನ್ನೂ ಸಾಧ್ಯವಾದಷ್ಟು ಮಟ್ಟಿಗೆ ಅಭಿವ್ಯಕ್ತಿಸಬಹುದೆಂದು ಶರಣರ ಈ ವಚನಗಳು ತೋರಿಸಿಕೊಟ್ಟವು. ವಸ್ತುವಿನ ಸತ್ವ-ಮಹತ್ವಗಳಿಂದ ವಚನದ ರೂಪಕ್ಕೆ, ಅಭಿವ್ಯಕ್ತಿಗೆ ಬಲ ಬಂದಿತು. ವಚನ ಸಮೂಹ ನಿಜವಾದ ಸಾಹಿತ್ಯವೆನಿಸಿತು.

ವಚನದ ಮಾದರಿ ವಿಶ್ವಸಾಹಿತ್ಯದಲ್ಲಿಯೇ ವಿಶಿಷ್ಟವಾದುದು. ಜಗತ್ತಿನ ಬೇರೆ ಯಾವ ಭಾಷೆಯಲ್ಲೂ ಈ ಬಗೆಯ ಸಾಹಿತ್ಯ ಪ್ರಕಾರ ಇದ್ದಂತಿಲ್ಲ. ಇದು ಜಾಗತಿಕ ಸಾಹಿತ್ಯಕ್ಕೆ ಶಿವಶರಣರ ವಿಶೇಷ ಹಾಗೂ ಅನನ್ಯ ಕೊಡುಗೆ.

ಪ್ರತಿ ವಚನವೂ ಸುಭಾಷಿತದ ಹಾಗೆ ತನಗೆ ತಾನೆ ಸ್ವತಂತ್ರವಾದುದು. ಭಾವಗೀತೆಯ ಹಾಗೆ ಒಂದೊಂದು ವಚನವೂ ಒಂದೇ ವಿಚಾರಕ್ಕೆ, ಒಂದೇ ಭಾವನೆಗೆ ಅಥವಾ ಒಂದೇ ಅನುಭವಕ್ಕೆ ಸೀಮಿತವಾದುದು. ಶರಣರ ವ್ಯಕ್ತಿಗತ ಮನೋಧರ್ಮಕ್ಕೆ, ದೃಷ್ಟಿಕೋನಕ್ಕೆ ಅನುಗುಣವಾಗಿ ಅವರವರ ವಚನವಿರುತ್ತದೆ. ಅವರವರ ಇಷ್ಟದೈವದ ಹೆಸರೇ ಅವರವರ ವಚನದ ಅಂಕಿತವಾಗಿರುವುದು ಇನ್ನೊಂದು ವೈಶಿಷ್ಟ್ಯ. ಶರಣರು ಬೇರೆ ಯಾರನ್ನೋ ಉದ್ದೇಶಿಸಿ ಉಪದೇಶ, ಬುದ್ಧಿವಾದ, ಹಿತವಚನ, ಬೋಧನೆ ಮಾಡುವುದಿಲ್ಲ. ತಮ್ಮ ಹೃದಯಸ್ಥ ಇಷ್ಟದೇವರಲ್ಲಿ ನಿವೇದಿಸಿಕೊಳ್ಳುವ ರೀತಿಯಲ್ಲಿ, ಬಹು ಸಂದರ್ಭಗಳಲ್ಲಿ ಆತ್ಮಗತವಾದ ನುಡಿಯೆಂಬ ರೀತಿಯಲ್ಲಿ ನುಡಿಯುತ್ತಾರೆ. ಒಮ್ಮೊಮ್ಮೆ ವಚನ ಆತ್ಮಾವಲೋಕನದಂತೆಯೂ ಇರುತ್ತದೆ. ಲೋಕೋಕ್ತಿಯಂತೆ, ತಮ್ಮ ವಿಶೇಷ ಅನುಭವವನ್ನು ಎಲ್ಲರೊಂದಿಗೆ ಹಂಚಿಕೊಳ್ಳುವ ರೀತಿಯಲ್ಲಿ ಕೂಡ ಇರುತ್ತದೆ.

> **ವಚನಗಳ ವಸ್ತು ಸಾಧಾರಣ ಶಿಷ್ಟಾಚಾರ, ನೈತಿಕ ಬೋಧನೆಗಳಿಂದ ಹಿಡಿದು ಅತ್ಯುನ್ನತ ಆಧ್ಯಾತ್ಮಿಕ-ಅನುಭಾವದ ಸ್ತರದ ಅಭಿವ್ಯಕ್ತಿಯವರೆಗೆ ವ್ಯಾಪಿಸಿದೆ. ಮಾತಿಗೆ ನಿಲುಕದ ದಿವ್ಯ ಅತೀತವನ್ನೂ, ಅಮೂರ್ತವಾದುದನ್ನೂ, ಎಲ್ಲಿಯವರೆಗೆ ಸಾಧ್ಯವೋ ಅಷ್ಟನ್ನಾದರೂ ಮಾತುಗಳಲ್ಲಿ ಹಿಡಿದಿಡುವ ತವಕ ಈ ವಚನಗಳಲ್ಲಿ ಕಾಣುತ್ತದೆ. ಹೀಗಾಗಿ ಸಾಧಾರಣ ಬಳಕೆಯ ಪದಗಳಲ್ಲಿಯೂ ಸಹ ಅಸಾಧಾರಣ ಸಂವಹನ ಶಕ್ತಿ ಅಪ್ರಜ್ಞಾಪೂರ್ವಕವಾಗಿಯೆ ಇವುಗಳಲ್ಲಿ ತುಂಬಿಕೊಂಡಿದೆ. ಹೀಗಾಗಿ ಅಭಿವ್ಯಕ್ತಿಸುವ ಉತ್ಕಟೇಚ್ಛೆ ಭಾವತೀವ್ರತೆ ಸಹಜವಾಗಿಯೇ ಯಶಸ್ಸನ್ನು ಕಂಡಿದೆ.**

ಶರಣರ ವಚನಗಳು ಎಬ್ಬಿಸಿದ ಹೊಸ ಅಲೆಗಳು ಕನ್ನಡ ಭಾಷೆ ಮತ್ತು ಸಾಹಿತ್ಯಗಳಲ್ಲಿ ಹೊಸ ಸಂಚಲನವನ್ನೇ ಉಂಟುಮಾಡಿದುವು. ಸಮಾಜದಲ್ಲಿರುವ ಮಾನವಸ್ವಭಾವದ ದೌರ್ಬಲ್ಯದಿಂದುಂಟಾದ ನಾನಾ ಬಗೆಯ ಭೇದಭಾವನೆಗಳನ್ನು ತೊಡೆದುಹಾಕಿ, ಸರ್ವಸಮಾನತೆ, ಸಾಮಾಜಿಕ ನ್ಯಾಯ, ಧರ್ಮ ಇವುಗಳ ನೆಲೆಗಟ್ಟಿನ ಮೇಲೆ, ಮಾನವೀಯತೆಯ ಮೇಲೆ ಹೊಸ ಬದುಕನ್ನೂ, ಸಮಾಜವನ್ನೂ ಕಟ್ಟಿಕೊಡಲು, ಶಿವಶರಣರು ಮೊದಲು ತಮ್ಮ ಆಚರಣೆಯಿಂದಲೇ ತೋರಿಸುವ ಮೂಲಕ, ವಚನಗಳಲ್ಲಿ ಸಂವಹನ ಮಾಡುವ ಮೂಲಕ, ಪ್ರಯತ್ನಿಸಿದರು. ಸಂಪ್ರದಾಯ, ಪರಂಪರೆಗಳ ಶೃಂಖಲೆಗಳನ್ನು ಕತ್ತರಿಸಿಹಾಕಿ ಸ್ವತಂತ್ರವಾದ ನವೀನ ವಿಚಾರಧಾರೆಯನ್ನು ವಚನಗಳ ರೂಪದಲ್ಲಿ ಹರಿಸಿದರು. ಇದು ಸಾಹಿತ್ಯಕ್ಕೇ ಒಂದು ಹೊಸ ತಿರುವನ್ನು ತಂದುಕೊಟ್ಟಿತು.

ಸರ್ವಸಮಾನತೆ, ಸತ್ಯನಿಷ್ಠುರತೆ, ಸದಾಚಾರ ಸದ್ಭಕ್ತಿಗಳಿಂದ ಕೂಡಿದ ನಡೆ, ಮೃದುವಾದ ಸುಸಂಸ್ಕೃತವಾದ ಮಾತು, ವ್ಯಕ್ತಿಗೌರವ, ವೃತ್ತಿಗೌರವ, ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ ಇರುವ ವೈಯಕ್ತಿಕ ಬದುಕು, ಸಾಮಾಜಿಕ ವಾತಾವರಣ, ಕಾಯಕ ನಿಷ್ಠೆ, ಕ್ರಿಯಾಶೀಲತೆ, ದಾಸೋಹ ಮನೋಧರ್ಮ, ಜೀವದಯೆ, ಸಮಷ್ಟಿಹಿತ, ದೇವರಲ್ಲಿ, ಮನುಷ್ಯರಲ್ಲಿ, ತನ್ನಲ್ಲಿ, ಒಳಿತಿನಲ್ಲಿ ಅಚಲವಾದ ವಿಶ್ವಾಸ, ಮಾನವಾಂತಃಕರಣ, ನಿರಂತರವಾದ ಆತ್ಮಾವಲೋಕನ - ಇವೆಲ್ಲ ಈ ವಚನಗಳಲ್ಲಿ ತುಂಬಿತುಳುಕಿವೆ. ರಸ-ಭಾವ, ಅಲಂಕಾರ ಮುಂತಾದ ಸಾಹಿತ್ಯಾಭಿವ್ಯಕ್ತಿಯ ಗುಣಲಕ್ಷಣಗಳನ್ನೂ ಸಾಕಷ್ಟು ವಚನಗಳಲ್ಲಿ ಕಾಣಬಹುದು.

### ಶರಣರ "ಸೊಳ್ನುಡಿ'

ಹಲವಾರು ಮೌಲಿಕ ಕಾರಣಗಳಿಂದಾಗಿ ವಚನಸಾಹಿತ್ಯ

ಅತ್ಯಂತ ಶ್ರೇಷ್ಠವಾಗಿದೆ, ಶ್ರೀಮಂತವಾಗಿದೆ, ಸಾವಿರ ವರ್ಷಗಳ ನಂತರವೂ ಮಾಸದೆ ಹೊಸದಾಗಿಯೆ ಇದೆ, ಇಂದಿಗೂ ಪ್ರಸ್ತುತವಾಗಿದೆ ಮತ್ತು ಸಮಕಾಲೀನವಾಗಿದೆ.

**ಕರಿಯನಿತ್ತಡೆ ಒಲ್ಲೆ ಸಿರಿಯನಿತ್ತಡೆ ಒಲ್ಲೆ**
**ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ**
**ನಿಮ್ಮ ಶರಣರ ಸೂಳ್ನುಡಿಯ ಒಂದರೆಗಳಿಗೆ**
**ಇತ್ತಡೆ ನಿಮ್ಮನಿತ್ತೆ ಕಾಣಾ ರಾಮನಾಥಾ.**

ವಚನಗಳ ಆದ್ಯ ಪ್ರವರ್ತಕರಲ್ಲಿ ಒಬ್ಬರಾದ ಜೇಡರ ದಾಸಿಮಯ್ಯನವರ ಈ ವಚನ, ಶಿವಶರಣರ 'ಸೂಳ್ನುಡಿ'ಯ ಮಹತ್ವವನ್ನು ಬಹು ಸೊಗಸಾಗಿ ಧ್ವನಿಸುತ್ತದೆ. ಅವರ ಅಂಕಿತ 'ರಾಮನಾಥ.' ಅವನು ವಿಶ್ವದೊಡೆಯ, ಏಕೈಕ ದೈವ, ಪರಮಶಿವ; ಶರಣ ದಾಸಿಮಯ್ಯನ ಇಷ್ಟದೈವದ ರೂಪ ಹಾಗೂ ನಾಮ. ಶರಣರು ಸದಾ ಸತ್ಯವನ್ನೇ ನುಡಿವ, ನುಡಿದಂತೆ ನಡೆವ ಭಕ್ತಶ್ರೇಷ್ಠರು. ಅವರು ನುಡಿದುದೇ ಶಿವತತ್ತ್ವ, ಅದೇ ತಮಸ್ಸಿನಿಂದ ಬೆಳಕಿನೆಡೆಗೆ ನಡೆಸುವ ಮಹಾಮಂತ್ರ. **"ಕೂಡಲ ಸಂಗನ ಶರಣರ ಕಾಯವೇ ಕೈಲಾಸ ಕಾಣಿರೊ"** ಎನ್ನುತ್ತಾರೆ ಬಸವಣ್ಣನವರು. ವಚನಾಭಿವ್ಯಕ್ತಿಯ ಮಾದರಿಯನ್ನು ಹಾಕಿಕೊಟ್ಟ ಅವರು,

**ಸಕ್ಕರೆಯ ಮಳಲು ಬೆಲ್ಲದ ಕೆಸರು**
**ತವರಾಜ ನೊರೆ ತೆರೆಯಂತೆ**
**ಆದ್ಯರ ವಚನವಿರಲು**
**ಬೇರೆ ಬಾವಿಯ ತೋಡಿ ಉಪ್ಪು ನೀರನುಂಬಂತೆ**
**ಆಯಿತೆನ್ನ ಮತಿ ಕೂಡಲಸಂಗಮದೇವಾ**

ಎಂದು ಹೇಳುತ್ತಲೆ ಸೊಗಸಾದ ವಚನಗಳ ಸಮೃದ್ಧ ಬೆಳೆಗೆ ಕಾರಣರಾದರು, ಮಧುರವಾದ ವಚನಗಳ ಹಿರಿಯ ಪರಂಪರೆಯನ್ನು ಮುಂದುವರಿಸಿದರು.

### ವಚನಗಳ ಧ್ಯೇಯೋದ್ದೇಶ

ವ್ಯಕ್ತಿಯ ಲೌಕಿಕ ಬದುಕು, ಪಾರಮಾರ್ಥಿಕ ಬದುಕು ಎರಡೂ ಉತ್ತಮಗೊಳ್ಳುವಂತಹ ವಿಕಾಸಕ್ಕಾಗಿ ಅವನಲ್ಲಿ ಅರಿವನ್ನು ಮೂಡಿಸಿ, ಸಾಧನೆಯಲ್ಲಿ ತೊಡಗಿಸುವುದೆ ವಚನಗಳ ಧ್ಯೇಯೋದ್ದೇಶ. ವ್ಯಕ್ತಿ ಉತ್ತಮಗೊಂಡರೆ ಸಮಾಜ ಉತ್ತಮಗೊಳ್ಳುತ್ತದೆ. ಹೀಗೆ ವಚನಗಳ ಮೂಲಕ, ಆತ್ಮೋದ್ಧಾರ, ಸಾಮಾಜಿಕ ಕಾಳಜಿ, ಸದ್ಭಕ್ತಿಯಿಂದ ಭಗವದೊಲುಮೆ, ಸದಾಚಾರದಿಂದ ಶ್ರೇಷ್ಠ ಸಮಾಜನಿರ್ಮಾಣವೇ ಶರಣರ ಗುರಿ. ಶರಣರು ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಕುಲಜರು, ಲೇಸನೇ ಮಾಡುವ ಕ್ರಿಯಾಶೀಲರು. ಅವರ ದೃಷ್ಟಿಯಲ್ಲಿ ಲೋಕದ ಬದುಕು ಬೇರೆಯಲ್ಲ, ಅಧ್ಯಾತ್ಮ ಸಾಧನೆ ಬೇರೆಯಲ್ಲ. ಮರ್ತ್ಯಲೋಕ ಬೇರೆಯಲ್ಲ, ಸ್ವರ್ಗಲೋಕ ಬೇರೆಯಲ್ಲ. ಅವರ ಅಭಿಪ್ರಾಯದಂತೆ, **"ಸತ್ಯವ ನುಡಿವುದೇ ದೇವಲೋಕ; ಮಿಥ್ಯವ ನುಡಿವುದೇ ಮರ್ತ್ಯಲೋಕ; ಆಚಾರವೇ ಸ್ವರ್ಗ; ಅನಾಚಾರವೇ (ಪರಪೀಡನೆ, ಅಧರ್ಮಗಳೇ) ನರಕ." "ನಂಬಿ ಕರೆದಡೆ ಓ ಎನ್ನನೇ ಶಿವ?"** ಎಂಬ ದೃಢವಿಶ್ವಾಸ ಅವರದು. ಅವರಿಗೆ ಕಾಯಕವೇ ಕೈಲಾಸ. ದಯೆಯೇ ಧರ್ಮದ ಮೂಲ. ದೇವರನ್ನೊಲಿಸಲು ಪಾಂಡಿತ್ಯ, ಶಾಸ್ತ್ರಜ್ಞಾನಗಳು ಮಾತ್ರವೇ ಆವಶ್ಯಕವಲ್ಲ. ಪ್ರತಿಭೆಯ ಅಗತ್ಯವೂ ಇಲ್ಲ. ಏಕೆಂದರೆ ಭಗವಂತನು ವೇದಪ್ರಿಯನೂ ಅಲ್ಲ, ನಾದಪ್ರಿಯನೂ ಅಲ್ಲ. ಅವನು ಭಕ್ತಿಪ್ರಿಯ. ಅವನಲ್ಲಿ ಅಂತಃಕರಣಪೂರ್ವಕವಾದ ಆಪ್ತ–ಗುಪ್ತ–ಮೊರೆ ಸಾಕು. ರಕ್ಷಿಸಲು, ದಾರಿತೋರಿಸಿ ಮುನ್ನಡೆಸಲು, ಅವನು ನಮ್ಮೊಳಗಿನಿಂದಲೆ ಪ್ರಕಟವಾಗುತ್ತಾನೆ. ಹೀಗೆ ಕರೆಯಲು, ತನ್ನೊಳಗೇ ಇರುವ ತನುಮನಸಹಿತವಾದ ತನ್ನಂಗವನ್ನೆಲ್ಲ ವ್ಯಾಪಿಸಿರುವ ಲಿಂಗವನ್ನರಿಯಲು, ಹುಟ್ಟು, ಜಾತಿ, ಕುಲ, ಬಡವ, ಬಲ್ಲಿದ, ಪಂಡಿತ, ಪಾಮರ, ಹೆಣ್ಣು, ಗಂಡು ಎಂಬ ಯಾವ ಭೇದವೂ ಇಲ್ಲದೆ ಎಲ್ಲರಿಗೂ ಅಧಿಕಾರವುಂಟು. **"ಅರಿತರೆ ಶರಣ, ಮರೆತರೆ ಮಾನವ". "ಅಂಗಭಾವವಳಿದು ಲಿಂಗಭಾವವುಂಟಾಗಬೇಕು."** ಅಹಂಕಾರವಳಿದು ಸಂಪೂರ್ಣ ಶರಣಾಗತಿಯೇ ಎಲ್ಲ ಜ್ಞಾನ–ಭಕ್ತಿ–ಕರ್ಮ–ಯೋಗ ಮಾರ್ಗಗಳ ಗುರಿ.

ತನ್ನ ತಾನರಿಯುವುದರಿಂದ ಹಿಡಿದು, ಜೀವನದಲ್ಲಿ ಸುತ್ತಣ ಜಗತ್ತನ್ನು, ಇವೆಲ್ಲದರ ಮೂಲ ಹಾಗೂ ಸತ್ವವೇ ಆದ 'ದೇವರು' ಎಂಬ ಪದವು ಯಾವುದನ್ನು ಸಂಕೇತಿಸುವುದೋ ವಿಶ್ವದ ಆ ಏಕಮೇವಾದ್ವಿತೀಯವಾದ ಶಕ್ತಿಯನ್ನು ಪರಿಭಾವಿಸಿ ಅದರೊಂದಿಗೆ ಒಂದಾಗುವ, ಅದೇ ಆಗುವ ಆನಂದದ ಹಂತದವರೆಗೆ ಈ ವಚನಗಳ ವಸ್ತುವ್ಯಾಪ್ತಿಯನ್ನು ಕಾಣಬಹುದು.

ಸಾಧಾರಣ ಅನುಭವಗಳಿಗೆ ಸಾಧಾರಣ ಪದಗಳು ಸಾಕು. ಉತ್ತರೋತ್ತರವಾದ ವಿಶೇಷ ಅನುಭವಗಳಿಗೆ ವಿಶೇಷವಾದ ಪದಪ್ರಯೋಗಗಳು ಬೇಕಾಗುತ್ತವೆ. ಅತೀತವಾದ ಅನುಭವಗಳಿಗೆ ಸಂಕೇತ, ಪ್ರತಿಮೆ, ಒಗಟು, ಬೆಡಗು ಮುಂತಾದ ಪದಚಮತ್ಕಾರಗಳೇ ಆಗಬೇಕು. ಹೀಗೆ ಅನುಭವದ ಅಂಚಿನ ವರೆಗೆ, ಅಭಿವ್ಯಕ್ತಿ ಸಾಮರ್ಥ್ಯದ ಕೊನೆಯವರೆಗೆ ನಿಂತು, ಅತೀತವಾದ ಕ್ಷಿತಿಜದ ನೋಟಮಾತ್ರದಲ್ಲಿ ಮೂಕವಾಗುವ ಪರಿ ಕೂಡ ವಚನಗಳಲ್ಲಿ ಧ್ವನಿತವಾಗುತ್ತದೆ.

### ವ್ಯಕ್ತಿಗತ ನಡೆನುಡಿ

ಸಾಮಾಜಿಕ ಕಳಕಳಿಯಿದ್ದ ಬಸವಣ್ಣನವರು ತಮ್ಮ ಹಲವಾರು ವಚನಗಳಲ್ಲಿ ವ್ಯಕ್ತಿಯೊಬ್ಬ ಸಮಾಜದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದರ ಬಗ್ಗೆ ಹೇಳಿದ್ದಾರೆ. ಇತರರ ದೋಷವನ್ನು ಎಣಿಸುವುದಕ್ಕೆ ಹೋಗದೆ, ಅವರನ್ನು ತಿದ್ದಲು ಹೋಗದೆ, ನಮ್ಮ ನಮ್ಮ ದೋಷದೌರ್ಬಲ್ಯಗಳನ್ನು ತಿದ್ದಿಕೊಳ್ಳುತ್ತ, ಸದ್ವರ್ತನೆಯ ಮಾದರಿಯನ್ನು ಸಮಾಜದ ಮುಂದಿಟ್ಟರೆ ಸಾಕು ಎನ್ನುವ ಅವರದೊಂದು ವಚನ ಹೀಗಿದೆ:

**ಲೋಕದ ಡೊಂಕ ನೀವೇಕೆ ತಿದ್ದುವಿರಿ**
**ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ**
**ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ**

ಮೊದಲು ನಮ್ಮ ನಡೆ ಶುದ್ಧವಾಗಿದೆಯೇ, ನಮ್ಮ ನುಡಿ ಶುದ್ಧವಾಗಿದೆಯೇ ಎಂಬುದನ್ನು ಪರೀಕ್ಷಿಸಿಕೊಳ್ಳಬೇಕು. ನಮ್ಮ

ದೈನಂದಿನ ಜೀವನದ ಸಾಮಾನ್ಯ ಶಿಷ್ಟಾಚಾರವು ಸಮರ್ಪಕವಾಗಿರಬೇಕು.

**" 'ಏನು ಬಂದಿರಿ ಹದುಳವಿದ್ದಿರೆ?' ಎಂದರೆ ನಿಮ್ಮ ಮೈಸಿರಿ ಹಾರಿಹೋಹುದೆ, ಕುಳ್ಳಿರೆಂದರೆ ನೆಲ ಕುಳಿ ಹೋಹುದೆ?"** ಎಂದು ಕೇಳುತ್ತಲೇ, **"ಕೊಡದಿದ್ದರೊಂದು ಗುಣವಿಲ್ಲದಿರ್ದಡೆ ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲಸಂಗಮದೇವನು?"** ಎಂದು ಎಚ್ಚರಿಕೆಯನ್ನು ಕೊಡುತ್ತಾರೆ, ಬಸವಣ್ಣನವರು. ಭಕ್ತರಾದವರಲ್ಲಿ ಅಹಂಕಾರ, ಬೂಟಾಟಿಕೆ ಇರಬಾರದು. ಇದ್ದಲ್ಲಿ ಆ ದೇವರೇ ಆ ಅಹಂಕಾರವನ್ನು ಚಿವುಟಿಹಾಕುತ್ತಾನೆ ಎಂದು ಇದರ ಅರ್ಥ.

ಮಾತು ಮೃದುವಾಗಿರಬೇಕು. ಮೃದುವಚನವೇ ಸಕಲಜಪ. ಸದ್ವಿನಯವೇ ಸದಾಶಿವನ ಒಲುಮೆ. ಹಾಗಿಲ್ಲದೆ ಹೋದರೆ, ದೇವರು ಒಪ್ಪುವುದಿಲ್ಲ. ಮಾತಿನಂತೆ ಮನವಿರಬೇಕು. ನುಡಿಯೊಳಗಿದ್ದು ಹಾಗೆ ನಡೆಯದಿದ್ದರೆ ಶಿವ ಹೇಗೆ ತಾನೇ ಒಲಿದಾನು?

ಸಜ್ಜನರಲ್ಲಿ ಸಂಗ್ರಹ ಬುದ್ಧಿ ಇರಬಾರದು. ಬಂದುದರಲ್ಲಿ ತೃಪ್ತಿ ಇರಬೇಕು. ಈ ಭಾವನೆ ಕೆಳಗಿನ ವಚನದಲ್ಲಿ ಒಡಮೂಡಿದೆ:

**ಹೊನ್ನಿನೊಳಗೊಂದೊರೆಯ**
**ಸೀರೆಯೊಳಗೊಂದೆಳೆಯ**
**ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ**
**ನಿಮ್ಮಾಣೆ, ನಿಮ್ಮ ಪುರಾತನರಾಣೆ**

ದೇಹದ ಆವಶ್ಯಕತೆಗಳನ್ನೆಲ್ಲ ಪೂರೈಸಿಕೊಳ್ಳುವ ಅತ್ಯಾಸೆ ಶರಣನಿಗೆ ವರ್ಜ್ಯ.

**ಒಡಲ ಕಳವಳಕ್ಕೆ ಬಾಯಸವಿಗೆ ಉಂಡೆನಾದರೆ**
**ನಿನ್ನ ತೊತ್ತಿನ ಮಗನಲ್ಲಾ!**

ಶರಣನಾದವನು ಮೈಮುರಿದು ಕೆಲಸಮಾಡಬೇಕು. ಮಾಡಿದಷ್ಟಕ್ಕೆ ಮಾತ್ರ ಸಂಭಾವನೆ ಪಡೆಯಬೇಕು. ಅದಕ್ಕೂ ಹೆಚ್ಚಿನದಕ್ಕೆ ಆಸೆ ಪಡುವುದು ಅಪ್ರಮಾಣಿಕತೆ.

**ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ**
**ಅಯ್ಯಾ...... ಈಸಕ್ಕಿಯಾಸೆ ನಿಮಗೇಕೆ?**
**ಈಶ್ವರನೊಪ್ಪ ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ಮಾರಯ್ಯ**

ಎನ್ನುತ್ತಾಳೆ, ಶರಣೆ ಲಕ್ಕಮ್ಮ, ಆಸೆಯಿರುವುದು ಅರಸರಿಗೆ, ಶ್ರೀಮಂತರಿಗೇ ಹೊರತು, ಶಿವಭಕ್ತರಿಗಲ್ಲ. ಆಸೆಯಿದ್ದವರು ಭಕ್ತರೆನ್ನಿಸಿಕೊಳ್ಳುವುದಿಲ್ಲ.

"ಬೇಡುವಾತ ಭಕ್ತನಲ್ಲ" ಎಂದು ನಿಷ್ಠುರವಾಗಿ ಹೇಳುತ್ತಾರೆ ಬಸವಣ್ಣನವರು. ಭಕ್ತನ ಗುಣಲಕ್ಷಣಗಳನ್ನು ಸ್ಪಷ್ಟವಾಗಿ ಹೇಳುತ್ತ,

**ಭಕ್ತನು ಶಾಂತನಾಗಿರಬೇಕು**
**ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು**
**ಭೂತಹಿತವಚನವ ನುಡಿಯಬೇಕು**
**ಸಕಲ ಪ್ರಾಣಿಗಳ ತನ್ನಂತೆ ಭಾವಿಸಬೇಕು**
**ಸಕಲ ಇಂದ್ರಿಯಂಗಳೂ ತನ್ನ ವಶಗತವಾಗಿರಬೇಕು**

ಎಂದು ವಿವರಿಸುತ್ತಾರೆ. ಅಕ್ಕ ಮಹಾದೇವಿಯು, **"ಈ ಲೋಕದಲಿ ಹುಟ್ಟಿದ ಬಳಿಕ ಕೋಪವ ತಾಳದೆ ಸಮಾಧಾನಿಯಾಗಿರಬೇಕು"** ಎನ್ನುತ್ತಾಳೆ. ಬದುಕನ್ನು, ಜಗತ್ತನ್ನು ಅದು ಇದ್ದ ಹಾಗೇ ಸ್ವೀಕರಿಸಬೇಕು, ಗೊಣಗಬಾರದು, ದೂರಬಾರದು. ಆಸೆಯನ್ನು ಬಿಟ್ಟರೆ ಮಾಯೆಯ ಭಯವಿಲ್ಲ. ಅಲ್ಲಮರು, **"ಹೆಣ್ಣು ಹೊನ್ನು ಮಣ್ಣು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ"** ಎಂದು ಸತ್ಯವನ್ನು ಬಹಿರಂಗಪಡಿಸುತ್ತಾರೆ. ಶರಣ ಸಿದ್ಧರಾಮರು ಕೂಡ, ಹೆಣ್ಣನ್ನು ಭೋಗದೃಷ್ಟಿಯಿಂದ ನೋಡುವವರಿಗೆ, ದಾಸಿಯೆಂದು ನಡೆಸಿಕೊಳ್ಳುವವರಿಗೆ, ಮಾಯೆಯೆಂದು ದೂರುವವರಿಗೆ, **"ಹೆಣ್ಣು ಸಾಕ್ಷಾತ್ ಕಪಿಲ ಸಿದ್ಧಮಲ್ಲಿಕಾರ್ಜುನ"** ಎಂದು ಎಚ್ಚರಿಸುತ್ತಾರೆ. ಎಲ್ಲ ಶರಣರೂ ಸಾರಿ ಸಾರಿ ಹೇಳುವುದು, **"ಛಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ; ಛಲಬೇಕು ಶರಣಂಗೆ ಪರಸತಿಯ-ನೊಲ್ಲೆನೆಂಬ"** ಎಂಬ ಬಸವಣ್ಣನವರ ವಚನದ ಆಶಯವನ್ನೇ. **ದಿಟವ ನುಡಿವುದು ನುಡಿದಂತೆ ನಡೆವುದು** – ಇದು ಶರಣರ ಸದಾಚಾರ.

**ವೇದಶಾಸ್ತ್ರಪುರಾಣಾಗಮಂಗಳೆಲ್ಲ ಕೊಟ್ಟಣವ ಕುಟ್ಟುತ್ತ**
**ನುಚ್ಚು ತೌಡು ಕಾಣಿ ಭೋ! ಇವ ಕುಟ್ಟಲೇಕೆ?**
**ಅತ್ತಲಿತ್ತ ಹರಿವ ಮನದ ಶಿರವನರಿವಡೆ**

ಆಗ ಉಂಟಾಗುವುದು ಪೂರ್ಣದೃಷ್ಟಿ, ಸಮ್ಯಕ್‌ಜ್ಞಾನ ಎನ್ನುತ್ತಾಳೆ ಕಿರಿಯ ಪ್ರಾಯದ ಭಕ್ತಿ-ವೈರಾಗ್ಯಗಳ ಮೂರ್ತಿ ಅಕ್ಕಮಹಾದೇವಿ. ಸತ್ಯದರಿವಾಗುವುದು ಪಾಂಡಿತ್ಯದಿಂದಲ್ಲ, ಮನೋನಿಗ್ರಹ-ಇಂದ್ರಿಯ ನಿಗ್ರಹಗಳಿಂದ ಕೂಡಿದ ಬದುಕಿನ ತಪದಿಂದ. **ಲಿಂಗದರಿವು** ಎಂದರೆ ಕಾಯದ ಜೀವದ ಹೊಲಿಗೆಯಳಿಯುವುದೇ ಆಗಿದೆ.

ಶರಣರ ವೈಚಾರಿಕ ಮತಿ ಹಾಗೂ ನಿಜವಾದ ಭಕ್ತಿಭಾವಗಳು ಶುಭಶಕುನ, ಅಪಶಕುನ, ಶುಭಲಗ್ನ, ತಾರಾಬಲ, ಗ್ರಹಬಲ ಇತ್ಯಾದಿ ಮೂಢನಂಬಿಕೆಗಳನ್ನು ಖಂಡಿಸುತ್ತದೆ, ಅಪಹಾಸ್ಯ ಮಾಡುತ್ತವೆ.

ಕಾಯಕ-ದಾಸೋಹಗಳನ್ನು ವ್ರತದಂತೆ ಕೈಕೊಂಡು, ಶ್ರದ್ಧೆ-ಸಂತೋಷಗಳಿಂದ ಮಾಡುತ್ತ, **"ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ?"** ಎಂಬ ವಿವೇಕ ತಾಳಿ, ಹೆಣ್ಣು-ಗಂಡು ಭೇದವಿಲ್ಲದ ಸಾಮಾಜಿಕ ಸಾಮರಸ್ಯದ ಜೀವನಕ್ಕೆ, ಆತ್ಮೋದ್ಧಾರಕ್ಕೆ ಸರ್ವರಿಗೂ ಸಮಾನ ಅಧಿಕಾರವಿದೆ ಎಂಬ ದೃಢನಿಶ್ಚಯದಲ್ಲಿ ಬಾಳಿ, ಜಗತ್ತಿಗೆ – ಮಾನವಕುಲಕ್ಕೆ ಮಾರ್ಗದರ್ಶನ ಮಾಡಿದ ಶರಣರ ವಚನಗಳು ವಿಶ್ವದ ಅಮೂಲ್ಯ ಸಂಪತ್ತಾಗಿವೆ ಎಂದರೆ ತಪ್ಪಾಗದು.

## ದಿವ್ಯಾನುಭೂತಿಯ ಅಭಿವ್ಯಕ್ತಿಗಳು

ವಚನಗಳು ಸಾಧಾರಣ ಶಿಷ್ಟಾಚಾರ ಸಂಹಿತೆಯಾಗಿರುವಂತೆ ಆತ್ಮಸಾಧನೆಯ, ದಿವ್ಯಾನುಭೂತಿಯ ಅಭಿವ್ಯಕ್ತಿಗಳೂ ಆಗಿರುವು

ದನ್ನು ಹುಟ್ಟಿನಿಂದ ದಲಿತರೆನಿಸಿದರೂ ಶಿವಯೋಗ ಸಾಧನೆಯಿಂದ ಶ್ರೇಷ್ಠ ಶರಣರಾದ ಉರಿಲಿಂಗ ಪೆದ್ದಿಯವರ ಅನುಭಾವದ ವಚನ ಹೀಗೆ ಬಹು ಸೊಗಸಾಗಿ ವ್ಯಕ್ತಪಡಿಸುತ್ತದೆ :

ಅಂಗೈಯ ಲಿಂಗವ ಕಂಗಳಿಂ ನೋಡಿ ಮನ ಹಾರೈಸಿದಲ್ಲಿ
ಅಂಗೇಂದ್ರಿಯಂಗಳೆಲ್ಲವೂ ಲಿಂಗೇಂದ್ರಿಯಂಗಳಾದುವು;
ಇನ್ನು ನೀನಂಜದಿರು ಮನವೇ. ಲಿಂಗವು ನಿನಗೆ ದೂರವೆಂದು
ಮನೋಮಧ್ಯದೊಳಿಪ್ಪನು ಅಂಗ–ಪ್ರಾಣ–ಭಾವ ಸರ್ವಾಂಗ
ಲಿಂಗವಾದ ಬಳಿಕ ಲಿಂಗ ಮಧ್ಯೆ ಪ್ರಾಣವಾಯಿತ್ತು;
ಪ್ರಾಣ ಮಧ್ಯೆ ಲಿಂಗವಾಯಿತ್ತು. ಎಲೆ ಮನವೇ ಇನ್ನು ಉತ್ಪತ್ತಿ
ಸ್ಥಿತಿ, ಲಯವಿಲ್ಲಾಗಿ. ಲಿಂಗದಿಂ ಜನಿಸಿ, ಲಿಂಗೇಂದ್ರಿಯ
ಲಿಂಗಜ್ಞಾನದಲ್ಲಿ ವರ್ತಿಸಿ, ದ್ವೈತಾದ್ವೈತವಿಲ್ಲಾಗಿ ಬಂದುದೇ
ಲಿಂಗಲೀಲೆ. ಇದ್ದುದೇ ಲಿಂಗದಾನಂದ, ಮನೋಲಯವೇ
ಲಿಂಗದ ನಿರವಯವು. ಇದು ಸತ್ಯ ಶಿವಬಲ್ಲ,
ಶಿವನಾಣೆ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

ಇಂತಹ ದಿವ್ಯಾನುಭೂತಿಯನ್ನು ತೋಂಟದ ಸಿದ್ಧಲಿಂಗ ಶರಣರ ಈ ನುಡಿಮುತ್ತುಗಳಲ್ಲಿ ನಾವು ಕಾಣಬಹುದು:

ಮನೋಮಧ್ಯದಲ್ಲಿ ಒಂದು ಶಶಿ ಸಂಧಾನದ ಕಳೆ ಸಂಧಿಸಿ
ಅರುಣೋದಯವಾದಂತೆ ಇದೆ. ಇದೇನಯ್ಯಾ?
ಅದು ಎನ್ನ ಭಾಗ್ಯದಿಂದ ಮತಿಪ್ರಕಾಶವಾಗಿತ್ತಯ್ಯ;
ಆ ಪ್ರಸನ್ನ ಪ್ರಸಾದವನೊಳಕೊಂಡು ಉತ್ತಮೋತ್ತಮವಾಗಿ
ನಿಮಗೆ ನಿಲುವಳಿಯಾದುದನು ಆರು ಬಲ್ಲರಯ್ಯಾ
ಮಹಾಲಿಂಗಗುರು ಸಿದ್ಧೇಶ್ವರ ಪ್ರಭುವೆ.

ಇನ್ನು ಐಕ್ಯಪೂರ್ವದ ಪರಮ ಆನಂದದ ಸ್ಥಿತಿಯನ್ನು ಬಸವಣ್ಣನವರ ಈ ವಚನ ಸೊಗಸಾಗಿ ಬಣ್ಣಿಸುತ್ತದೆ:

ಕಂಗಳ ನೋಟ ಹೃದಯದ ಜ್ಞಾನ!
ಮನದಲ್ಲಿ ಮಾತಾಡುತಿರ್ದೆನಯ್ಯಾ
ಜೇನ ಮಳೆಗಳು ಕರೆದವು,
ಅಮೃತ ಕಳೆಗಳು ಸುರಿದವು!
ಕೂಡಲಸಂಗಮದೇವರೆಂಬ ರಸಸಾಗರ
ದೊಳೋಲಾಡುತಿರ್ದೆನಯ್ಯಾ

ಇಲ್ಲಿಂದ ಮೇಲೆ ಶಬ್ದಗಳಿಲ್ಲ. ಮಾತಿಗೆ ಮೀರಿದ ಮನಸಿಗೆ ನಿಲುಕದ ದಿವ್ಯವಾದ ಮೂಕ, ಮೌನಸ್ಥಿತಿ! ಆಡಲು ಬಣ್ಣಿಸಲು ಸಾಧ್ಯವಾಗಿದ್ದುದೆಲ್ಲ "ಮಾತು ಜ್ಯೋತಿರ್ಲಿಂಗ" ವೇ ಆದುದು.

ಮಾತೆಂಬುದು ಜ್ಯೋತಿರ್ಲಿಂಗ!
ಸ್ವರವೆಂಬುದು ಪರತತ್ತ್ವ,
ಮಾತಿನ ಬಣಬೆಯ ಮುಂತಿಟ್ಟುಕೊಂಡು
'ಆತನ' ಕಂಡಿಹೆನೆಂದಡೆ,
ಆತನತ್ಯತಿಷ್ಠದ್ದಶಾಂಗುಲ.
ಆತನೆಂತು ಸಿಲುಕುವನೆಂದಾತನಂಬಿಗರ ಚೌಡಯ್ಯ

ಆದರೆ ಬಸವಣ್ಣನವರ **"ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬಹುದು"** ಎಂಬ ಮಾತು ಸತ್ಯ ನುಡಿ. ಅದನ್ನು ಮನನ ಮಾಡಿದಷ್ಟೂ ಆಳವಾಗುತ್ತದೆ ಚಿಂತನ, ಧ್ಯಾನ. ಆದರೆ ಅದು ಕೇವಲ ಅನುಭವವೇದ್ಯ!

ಚೆನ್ನಬಸವಣ್ಣನು ಬಸವಣ್ಣನ ಚೆಮ್ಮಾವುಗೆಯ ಬಂಟ. ಅಲ್ಲಮಪ್ರಭು ಮತ್ತು ಬಸವಣ್ಣನವರು ಅವನ ಅದ್ಭುತ ಜ್ಞಾನ–ಪ್ರತಿಭೆಗಳಿಗೆ ಮಾರುಹೋಗಿದ್ದರು. ಅಲ್ಲಮಪ್ರಭುವಿಗೆ ಚೆನ್ನಬಸವಣ್ಣನು, **"ಬೆಳಗುವ ಜ್ಯೋತಿಯ ತಿರುಳಿನಂತೆ ಹೊಳೆವ ಕಂಗಳ ಕಾಂತಿಯೊಳಗೆ ಒಳಹೊರಗೆನ್ನದೆ ಅಳವಟ್ಟ ಶಿವಯೋಗಿ"** ಯಂತೆ ಕಂಡನು. ಚೆನ್ನಬಸವಣ್ಣನಿಂದ ಆಚಾರಭಿಕ್ಷೆಯನ್ನು ಬೇಡುತ್ತಾನೆ ಅಲ್ಲಮಪ್ರಭು. ಅದಕ್ಕೆ ಚೆನ್ನಬಸವಣ್ಣನು ಶರಣನ ಕುರುಹನ್ನು ಹೀಗೆ ಅರಹುತ್ತಾನೆ: **"ಶರಣನು ದೇಹಿಯಲ್ಲ, ನಿರ್ದೇಹಿಯಲ್ಲ, ಬೋಧಕನಲ್ಲ, ನಿರ್ಬೋಧಕನಲ್ಲ, ಕಾಮಿಯಲ್ಲ, ನಿಷ್ಕಾಮಿಯಲ್ಲ! ಆಸೆವಿಡಿದುಬಂದ ಅನುಮಿಷನಲ್ಲ. ಅವಗುಣವಿಲ್ಲದ ನಿರ್ಗುಣ ಶರಣನು ಕೂಡಲಚೆನ್ನಸಂಗಮದೇವಾ!"**

ನುಲಿಯ ಚಂದಯ್ಯ ಕಾಯಕದ ಕಲಿ; ಜಂಗಮದಾಸೋಹಿ. ಇಷ್ಟಲಿಂಗದ ಹಂಗನ್ನು ಹರಿದವನು. ಚಂದಯ್ಯನಿಗೆ ಜಂಗಮದಾಸೋಹವೊಂದೇ ಸಾಕೆನಿಸಿತ್ತು. ಇಷ್ಟಲಿಂಗದ ಆವಶ್ಯಕತೆಯನ್ನು ಆತನಿಗೆ ಮನವರಿಕೆ ಮಾಡಿಕೊಡಲು ಅಲ್ಲಮಪ್ರಭು ಚೆನ್ನಬಸವಣ್ಣನಿಗೆ ಹೇಳುತ್ತಾನೆ. ಆಗ ಚೆನ್ನಬಸವಣ್ಣನು ಇಷ್ಟಲಿಂಗ ಮತ್ತು ಜಂಗಮ ಸಂಬಂಧವನ್ನು ಬಹು ಮಾರ್ಮಿಕವಾಗಿ ಹೀಗೆ ತೋರಿಸಿಕೊಡುತ್ತಾನೆ:

"ಶ್ರೀಗುರು ಕರುಣವೆ ಲಿಂಗ; ಲಿಂಗದ ನಿಜವೆ ಜಂಗಮ. ಇಂತು ಇದು ಬಹಿರಂಗದ ವರ್ತನೆ. ಇನ್ನು ಅಂತರಂಗದ ಸುಜ್ಞಾನವೆ ಜಂಗಮ. ಆ ಜಂಗಮದ ನಡೆಯೆ ಸತ್‌ಕ್ರಿಯೆ ಲಿಂಗ. ಈ ಉಭಯದ ಏಕತ್ವಸಿದ್ಧಿಯೇ ಗುರು. ಇದು ಕಾರಣ, ಅಂಗತ್ರಯದಲ್ಲಿ ಲಿಂಗತ್ರಯ ಸಂಬಂಧವಾದಲ್ಲಿ ಜಂಗಮದಾಸೋಹ. ಜಂಗಮದಾಸೋಹವಿಲ್ಲದಡೆ ಲಿಂಗತೃಪ್ತಿ ಇಲ್ಲ. ಅಂಗದ ಮೇಲೆ ಲಿಂಗವಿಲ್ಲದಿರ್ದಡೆ ಜಂಗಮಸೇವೆಯ ಕೈಕೊಳ್ಳ. ಅದು ಕಾರಣ ಒಂದು ಬಿಟ್ಟು ಒಂದರಲ್ಲಿ ನಿಂದರೆ, ಅಂಗವಿಲ್ಲದ ಆತ್ಮನಂತೆ, ಶಕ್ತಿ ಇಲ್ಲದ ಶಿವನಂತೆ, ದೀಪವಿಲ್ಲದ ಪ್ರಕಾಶದಂತೆ ಬಂದಾಗ ಶೂನ್ಯವಾಗಿ ಭಕ್ತಿಯುಂಟೆ? ಅವಯವಹೀನನು ರಾಯಪಟ್ಟಣಕ್ಕೆ ಸಲ್ಲುವನೆ? ಅದು ದೇವತ್ವಕ್ಕೆ ಸಲ್ಲದು. ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ ತ್ರಿವಿಧ ಸನ್ಮತವೆ ಚರಸೇವೆಯಯ್ಯಾ ಚಂದಯ್ಯ ಪ್ರಭುವೇ!"

(ಆಧಾರ: **ಷಟ್‌ಸ್ಥಲಬ್ರಹ್ಮಿ ಚೆನ್ನಬಸವಣ್ಣ,** ಲೇಖಕರು: ಅನ್ನದಾನಯ್ಯ ಪುರಾಣಿಕ, ಪುಟ ೧೯ ಮತ್ತು ೨೩)